ಅಧ್ಯಕ್ಷರು :— ಮಾನ್ಯ ಯು.ಆರ್. ಸಭಾಪತಿಯವರು ಮತ್ತು ಮಾನ್ಯ ಕೆ.ಜಯಪ್ರಕಾಶ್ ಹೆಗ್ಡೆಯವರು ಒಂದು ವಿಷಯವನ್ನು ಪ್ರಸ್ತಾಪಿಸಲು ಅನುಮತಿಯನ್ನು ಕೇಳಿದ್ದಾರೆ ಮೊದಲು ಶ್ರೀ ಹೆಗ್ಡೆಯವರು ಕೇಳಿದ್ದರಿಂದ ಅವರು ಮೊದಲು ಪ್ರಸ್ತಾಪಿಸಲು ಅವಕಾಶ ಕೊಡುತ್ತೇನೆ. ಅನಂತರ ತಾವುಗಳು ಪ್ರಸ್ತಾಪಿಸಬಹುದು.

(ಅ) ಲೋಕಸಭಾ ಸದಸ್ಯರ ಸವಲತ್ತುಗಳ ಬಗ್ಗೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) :— ಸನ್ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಮಾನ್ಯ ಸಂಸದೀಯ ಸಚಿವರು ಉಪಸ್ಥಿತರಿದ್ದಾರೆ. ಇದು ಸದನದ ಎಲ್ಲಾ ಸದಸ್ಯರಿಗೂ ಸಂಬಂಧಪಟ್ಟ ವಿಚಾರವೂ ಆಗಿದೆ. ಮೊನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಯವರು ಸಭೆಯ ಮುಂದೆ ಕೆಲವು ಕಾಗದಪತ್ರಗಳನ್ನು ಮಂಡಿಸಿದರು. ಅದರಲ್ಲಿ ಒಂದು ಪ್ರಮುಖವಾದ ವಿಚಾರವನ್ನು ಪರಿಶೀಲಿಸುವಾಗ ಲೋಕ ಸಭಾ ಸದಸ್ಯರುಗಳಿಗೆ ಸಂಬಂಧಪಟ್ಟ ವಿಚಾರ ಇತ್ತು. ಅದರಲ್ಲಿ ಸಂಸತ್ ಸದಸ್ಯರಿಗೆ ಹಲವಾರು ವ್ಯವಸ್ಥೆಗಳನ್ನು ರಾಜ್ಯ ಸರಕಾರದಿಂದ ಕೊಡುವ ವ್ಯವಸ್ಥೆಯನ್ನು ಮಾಡಿದ್ದಾರೆ. ಕೇಂದ್ರ ಸರಕಾರದಿಂದ ಸಿಗುವ ಅನೇಕ ಸವಲತ್ತುಗಳನ್ನು ಬಿಟ್ಟು ಇನ್ನೂ ಅನೇಕ ಸೌಲಭ್ಯಗಳನ್ನು ರಾಜ್ಯ ಸರಕಾರದವರು ಕೊಡುವ ವ್ಯವಸ್ಥೆಯನ್ನು ಮಾಡಿದ್ದಾರೆ. After the words Personal Assistant, Drivers and Group `D' official ಇವುಗಳೆಲ್ಲವನ್ನೂ ಕೊಡುವುದರ ಜೊತೆಗೆ ಪಪ್ಪುಟಿ ಮಿನಿಸ್ಟರ್ಸ್ ಎಂದು ಎಲ್ಲೆಲ್ಲಿ ಇದೆ ಅದರೊಂದಿಗೆ ಮೆಂಬರ್ ಆಫ್ ಪಾರ್ಲಿಮೆಂಟ್ ಎಂಬುದನ್ನು ಸೇರಿಸಿಕೊಳ್ಳಬೇಕೆಂದು ಒಂದು ನೋಟಿಫಿಕೇಶನ್‌ನ್ನು ಹೊರಡಿಸಿದ್ದಾರೆ. ಇವೆಲ್ಲಾ ಕೇಂದ್ರ ಸರಕಾರದವರು ಕೊಡುವ ಸವಲತ್ತುಗಳನ್ನು ನಾವು ಒಪ್ಪಿಕೊಳ್ಳುತ್ತೇನೆ. ಅದರ ಜೊತೆಗೆ ರಾಜ್ಯದ ಬೊಕ್ಕಸದಿಂದ ಅವರಿಗೆ ಕೊಡುವಂಥ ಸವಲತ್ತುಗಳು ನಮಗೆ ಹೊರೆಯಾಗುವ ಸಂಭವವಿದೆ ಎಂದು ನಾನು ಅಭಿಪ್ರಾಯಪಡುತ್ತೇನೆ. ನಮ್ಮಲ್ಲಿ ಆಶ್ರಯ ಮನೆಗಳಿಗೆ ಕೊಡಲು ಹಣವಿಲ್ಲವೆಂದು ಹೇಳುತ್ತಿದ್ದೇವೆ. ಯೋಜನೆಗಳ ಕಾರ್ಯಗತಕ್ಕಾಗಿ ಹಣ ಸಾಕಾಗುವುದಿಲ್ಲ ಎಂಬ ಚರ್ಚೆ ಇಲ್ಲಿ ನಡೆಯುತ್ತದೆ. ಎಂ.ಪಿ. ಗಳಿಗೆ ಕ್ಷೇತ್ರದಲ್ಲಿ ಓಡಾಡಲು ಜಿಲ್ಲಾಧಿಕಾರಿಗಳು ಒಂದು ಕಾರನ್ನು ಒದಗಿಸುವ ಬಗ್ಗೆ ನಾವು ಬೇಡವೆನ್ನುವುದಿಲ್ಲ. ಆದರೆ ಇನ್ನೂ ಕೆಲವು ಸೌಲಭ್ಯಗಳನ್ನು ಕೊಡಲು ವ್ಯವಸ್ಥೆ ಮಾಡಿದರೆ ಭಾರೀ ಹೊರೆ ಬೀಳುತ್ತದೆ. ಪ್ರಾಯಶಃ ರಾಜ್ಯದಲ್ಲಿ ನಿಗಮ ಮಂಡಳಿಗಳ ಅಧ್ಯಕ್ಷರುಗಳ ನೇಮಕವಾಗುತ್ತದೆ. ಆಗ ಎಲ್ಲರೂ ಕೆಂಪು ಲೈಟನ್ನು, ಫ್ಲ್ಯಾಗ್‌ನ್ನು ಕಾರಿಗೆ ಹಾಕಿಕೊಂಡು ಹೋಗುತ್ತಾರೆ. ಯಾರು ಮಂತ್ರಿ? ಯಾರು ಅಧ್ಯಕ್ಷರು? ಯಾರು ಸಂಸತ್ ಸದಸ್ಯರು ? ಎಂದು ಜನರಿಗೆ ಗೊತ್ತಾಗುವುದಿಲ್ಲ. ಅಂತೆಯೇ ನಮ್ಮ ಸಂಸತ್ ಸದಸ್ಯರ ಮತ್ತು ಶಾಸಕರ ಕಾರ್ಯಮ್ಯಾಟ್ರಿ ಏನು ಎಂಬುದನ್ನು ತಾವುಗಳು ಹೇಳಬೇಕು. ಕ್ಷೇತ್ರದಲ್ಲಿ ವಿಲೇಜ್ ಅಕೌಂಟೆಂಟ್‌ಗಳ ಟ್ರಾನ್ಸ್‌ಫರ್, ಕಾನ್ಸ್‌ಟೇಬಲ್‌ಗಳ ಟ್ರಾನ್ಸ್‌ಫರ್, ಮುಂತಾಗಿ ಎಲ್ಲದರಲ್ಲಿಯೂ ಕೈ ಹಾಕುವಂಥ ಪರಿಸ್ಥಿತಿ ನಿರ್ಮಾಣವಾಗಿದೆ.

ಅಧ್ಯಕ್ಷರು :— ಮಾನ್ಯ ಸಂಸತ್ ಸದಸ್ಯರುಗಳ ಬಗ್ಗೆ ಇಲ್ಲಿ ಅಷ್ಟು ಲಘುವಾಗಿ ಮಾತನಾಡುವುದು ಬೇಡ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :— ನಾನು ನಡೆಯುತ್ತಾ ಇರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು :— ದಯವಿಟ್ಟು ತಾವುಗಳೆಲ್ಲರೂ ಕುಳಿತುಕೊಳ್ಳಬೇಕು. ನಾವು ಸದನದಲ್ಲಿ ದಯಮಾಡಿ ಸಂಸತ್ ಸದಸ್ಯರ ಬಗ್ಗೆ ಲಘುವಾಗಿ ಮಾತನಾಡುವುದು ಬೇಡ. ಇದನ್ನು ಹೇಳುವುದು ನನ್ನ ಕರ್ತವ್ಯ ಹೇಳಿದ್ದೇನೆ. ಮಾನ್ಯ ಹೆಗ್ಡೆಯವರು ವಿಷಯವನ್ನು ಪ್ರಸ್ತಾಪಿಸಲು ಪ್ರಾರಂಭ ಮಾಡಿದ್ದಾರೆ. ಬೇರೆ ಸದಸ್ಯರು ಆ ಕುರಿತು ಮಾತನಾಡಲು ಪ್ರಾರಂಭ ಮಾಡಿದರೆ ವಿಷಯ ಎಲ್ಲಿ ಹೋಗುತ್ತದೆ, ಏನಾಗುತ್ತದೆ ಎಂಬುದನ್ನು ಹೇಳಲಾಗುವುದಿಲ್ಲ. ಯಾರ್ಯಾರು ಏನು ಮಾತನಾಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಸದಸ್ಯರುಗಳ ಅಭಿಪ್ರಾಯಗಳು ಹೇಗೆ ಹೊರಬರುತ್ತವೆಂದು ನಾವು ಹೇಳುವುದಕ್ಕಾಗುವುದಿಲ್ಲ. ಆನಂತರ ನಾವು ನಿಲ್ಲಿಸುವುದು ಇತ್ಯಾದಿಗಳು ಆಗುವುದು ಬೇಡ. ಆದ್ದರಿಂದ, ಯಾರೂ ಸಂಸತ್ ಸದಸ್ಯರ ಬಗ್ಗೆ ಲಘುವಾಗಿ ಮಾತನಾಡುವುದು ಬೇಡ. ನಾನು ಈ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಮಾತನಾಡುತ್ತೇನೆ. ಆಮೇಲೆ ವಿಷಯವನ್ನು ತೆಗೆದುಕೊಳ್ಳೋಣ. ಇದು ನನ್ನ ರೂಲಿಂಗ್,..

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಅಧ್ಯಕ್ಷರೇ, ನಾವು ಯಾರೂ ಸಂಸತ್ ಸದಸ್ಯರ ವಿಚಾರದಲ್ಲಿ ಲಘುವಾಗಿ ಮಾತನಾಡಿಲ್ಲ. ಮಾನ್ಯ ಅಧ್ಯಕ್ಷರು ದಯವಿಟ್ಟು ಈ ವಿಷಯದಲ್ಲಿ ರೂಲಿಂಗ್ ಕೊಡುವುದಕ್ಕೆ ಹೋಗಬೇಡಿ. ತಮ್ಮ ರೂಲಿಂಗ್ ನ್ನು ದಯವಿಟ್ಟು ಬದಲಾವಣೆ ಮಾಡಿಕೊಳ್ಳಿ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :— ಇಲ್ಲ, ದಯವಿಟ್ಟು...

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ಈ ವಿಚಾರ ಪ್ರಸ್ತಾವಕ್ಕೆ ಅವಕಾಶ ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. This must be allowed. I want to submit to your concern ನಾವುಗಳು ಸಂವಿಧಾನದಲ್ಲಿ ಬದಲಾವಣೆಯನ್ನು ಮಾಡಿಕೊಂಡಿದ್ದೇವೆ. ಸದನದಲ್ಲಿ ಅನೇಕ ಮಾನ್ಯ ಹಿರಿಯ ಸದಸ್ಯರುಗಳಿದ್ದಾರೆ. ಮಾನ್ಯ ಕೆ.ಜಿ. ರಂಗನಾಥ್‌ರವರು ವಿಧಾನಸಭೆಯ ಅಧ್ಯಕ್ಷರಾಗಿದ್ದವರು. ಅವರು ಅನೇಕ

ವರ್ಷಗಳ ಕಾಲ ವಿಧಾನಸಭಾ ಸದಸ್ಯರಾಗಿದ್ದವರು ಲೋಕಸಭಾ ಸದಸ್ಯರಾಗಿದ್ದವರು. ಹಾಗೆಯೇ ಚಂದ್ರೇಗೌಡರು ಕೂಡ ಲೋಕಸಭೆ ಮತ್ತು ರಾಜ್ಯ ಸಭಾ ಸದಸ್ಯರಾಗಿದ್ದವರು. ವಿಧಾನ ಪರಿಷತ್‌ನ ವಿರೋಧಪಕ್ಷದ ನಾಯಕರಾಗಿದ್ದವರು. ಮಂತ್ರಿಗಳಾಗಿದ್ದವರು. ಈ ಸಭೆಯ ಅಧ್ಯಕ್ಷರಾಗಿದ್ದವರು. ಆದರೆ, ಇಲ್ಲಿರುವ ವಿಚಾರ ಅಂದರೆ ತಮಗೂ ಕೂಡ ಮನಸ್ಸಿನಲ್ಲಿದೆ, ಆದರೆ, ದಯಮಾಡಿ ತಾವುಗಳ ರೂಲಿಂಗ್ ಕೊಡಲು ಹೋಗಬೇಡಿ. ತಮ್ಮ ಮನಸ್ಸನ್ನು ಒಲಿಸಿಕೊಳ್ಳಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ನಮ್ಮಲ್ಲಿ 28 ಜನ ಲೋಕಸಭಾ ಸದಸ್ಯರಿದ್ದಾರೆ, ರಾಜ್ಯಸಭಾ ಸದಸ್ಯರಿದ್ದಾರೆ. ನಾವು ಇಂಥ ವಿಚಾರಗಳ ಬಗ್ಗೆ ಮಾತನಾಡಬೇಕಾಗುತ್ತದೆ.

ಅಧ್ಯಕ್ಷರು :— ಸಂಸತ್ ಸದಸ್ಯರ ಬಗ್ಗೆ ಲಘುವಾಗಿ ಮಾತನಾಡಬಾರದು ಎಂದು ನಾನು ಹೇಳುತ್ತಾ ಇದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ನಮ್ಮಲ್ಲಿ ಎಂ.ಪಿ.ಯವರು 28 ಹಾಗೂ ರಾಜ್ಯಸಭಾ ಸದಸ್ಯರು 14-15 ಜನರಿದ್ದಾರೆ. ಅವರುಗಳ ಬಗ್ಗೆ ನಮಗೆ ಗೌರವ, ಶ್ರದ್ಧೆ, ನಂಬಿಕೆ, ವಿಶ್ವಾಸ, ಅಪಾರವಾಗಿದ್ದು ಅದನ್ನು ಅಳೆಯಲು ವರ್ಣನೆ ಮಾಡಲು ಸಾಧ್ಯವಿಲ್ಲ. ಕಾರಣವೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವ ಉತ್ತರ ಕರ್ನಾಟಕ ರಾಜ್ಯದ 172 ಪ್ರಸ್ತಾವನೆಗಳು ಕೇಂದ್ರಸರ್ಕಾರದಲ್ಲಿ ಬಾಕಿ ಇವೆ. ಇವುಗಳ ಬಗ್ಗೆ ಲೋಕಸಭೆ ರಾಜ್ಯಸಭೆಗಳಲ್ಲಿ ಬಹಳ ಪ್ರಸ್ತಾಪವಾಗುತ್ತಿದೆ. ಇದು ಮೊದಲನೇ ಭಾಗ. ಹಿಂದೆ ಸಂವಿಧಾನದಲ್ಲಿ ಬದಲಾವಣೆ ಮಾಡಿದೆವು. ದಿವಂಗತ ರಾಜೀವ್ ಗಾಂಧಿಯವರು ಮಾಡಿದರು, ಅವರ ಬಗ್ಗೆ ನನಗೆ ಅಭಿಮಾನವಿದೆ, ಗೌರವವಿದೆ, ಈ ದೇಶದ ಪ್ರಧಾನಿಯಾಗಿದ್ದವರು. ಇಲ್ಲಿ ಕರ್ನಾಟಕದಲ್ಲಿ ನಾವು ಅಧಿಕಾರ ವಿಕೇಂದ್ರೀಕರಣ ಮಾಡಿದಾಗ, ಇದನ್ನು ಬರೀ ಪಶ್ಚಿಮಬಂಗಾಳ, ಕರ್ನಾಟಕಗಳಲ್ಲಿ ಮಾಡಿದರೆ ಸಾಲದು, ಸಂವಿಧಾನದಲ್ಲೇ ತಿದ್ದುಪಡಿ ತಂದು ವಿಕೇಂದ್ರೀಕರಣಕ್ಕೆ ಅವಕಾಶ ಕೊಟ್ಟಿದ್ದನ್ನು ನಾವು ಚರಿತ್ರೆ ಮರೆಯಲು ಸಾಧ್ಯವಿಲ್ಲ. ಆದರೆ ಇದಾದನಂತರ ಇವತ್ತು ಅದರ ವಿರುದ್ಧ ಆಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಅವರು ತಂದ ವಿಕೇಂದ್ರೀಕರಣದ ಬಗ್ಗೆ ನಮ್ಮದೇ ಆದ ಅಭಿಪ್ರಾಯಗಳಿರಬಹುದು. ದುರುಪಯೋಗದ ಬಗ್ಗೆ, ನಮ್ಮ ಚುನಾಯಿತ ಪ್ರತಿನಿಧಿಗಳಿಗೆ ತರಬೇತಿ ತಿಳಿವಳಿಕೆ ಬೇಕು ಎಂಬುದು ನಿಜ, ನಮ್ಮ ತಕರಾರಿಲ್ಲ. ಆದರೆ ಲೋಕಸಭಾ ಸದಸ್ಯರ ಕಾರ್ಯವ್ಯಾಪ್ತಿ ದೊಡ್ಡದು ಎಂಬುದರ ಬಗ್ಗೆಯೂ ತಕರಾರಿಲ್ಲ. ಆದರೆ ಇವತ್ತು ನಮ್ಮ ಮುಂದೆ ಬಂದಿರುವ ಪ್ರಶ್ನೆ ಏನು? ಅಧ್ಯಕ್ಷರೇ ತಮಗೆ ಗೊತ್ತಿದೆ ಅನೇಕ ಜಿಲ್ಲೆಗಳಲ್ಲಿ ಅಲ್ಲಿನ ಜಿಲ್ಲಾಮಂತ್ರಿಗಳಿಗೂ ಅಲ್ಲಿನ ಲೋಕಸಭಾ ಸದಸ್ಯರಿಗೂ ಸಂಘರ್ಷವಿದೆ. ಇದರಿಂದ ಅನೇಕ ಜಿಲ್ಲೆಗಳಲ್ಲಿ ಆಡಳಿತದ ಮೇಲೆ ದುಷ್ಪರಿಣಾಮಗಳಾಗುತ್ತವೆ. ಶಾಸಕರಲ್ಲಿ ಗುಂಪುಗಳನ್ನು ಮಾಡುತ್ತಾರೆ. ಇದು ಆಡಳಿತ ಪಕ್ಷಕ್ಕೆ ಬಂದಿರುವುದಷ್ಟೇ ಅಲ್ಲ, ಇವತ್ತು ಸರ್ಕಾರದ ಆಡಳಿತ ಯಂತ್ರದ ಮೇಲಾಗುವ ದುಷ್ಪರಿಣಾಮವನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಒಂದು ಕಡೆ

ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆ ಎನ್ನುವುದು, ಇನ್ನೊಂದು ಕಡೆ ಇವರಿಗೆ ಈ ನೋಟಿಫಿಕೇಶನ್ ಮೂಲಕ ಅಧಿಕಾರ ಕೊಡುವ ಕೆಲಸವೇನಿದೆ ಅದನ್ನು ಮಾಡಲು ನಾವು ಅವಕಾಶ ಮಾಡಿಕೊಡಬಾರದೆಂಬ ಉದ್ದೇಶದಿಂದ ಸದಸ್ಯ ಜಯಪ್ರಕಾಶ್ ಹೆಗಡೆಯವರು ನಮ್ಮ ಹಕ್ಕಿಗೆ ಚ್ಯುತಿಯುಂಟಾಗಿದೆ ಎಂದು ಇಲ್ಲಿ ಎತ್ತಲು ಹೊರಟಿರುವುದು. ಇವತ್ತಲ್ಲ, ನಾಳೆ ಇದು ಚರ್ಚೆಯಾಗಲೇಬೇಕು. ಅದರಲ್ಲಿ ತಪ್ಪೇನಿದೆ ಸ್ವಾಮಿ? ಮುಖ್ಯಮಂತ್ರಿಗಳು ಬಂದಮೇಲೆ ತಾವು ದಯವಿಟ್ಟು ಇದಕ್ಕೆ ಒಂದು ಅವಕಾಶ ಮಾಡಿಕೊಡಿ. ಇದೊಂದು ಕೆಟ್ಟ ಸಂಪ್ರದಾಯ. ಕರ್ನಾಟಕದಿಂದ ಪ್ರಾರಂಭವಾಗುವುದು ಬೇಡ. ಲೋಕಸಭಾ ಸದಸ್ಯರು ಅವರ ಕೆಲಸಗಳನ್ನು ಮಾಡಲಿ. ಅವರಿಗೆ ಹೊಸ ಹಾರುಗಳನ್ನು ಕೊಟ್ಟಿದ್ದೀರಿ, ಬಹಳ ಸಂತೋಷ. ಮೂರು ಸೆಕ್ರೆಟರಿಗಳನ್ನು ಕೊಟ್ಟಿದ್ದೀರಿ, ಬಹಳ ಸಂತೋಷ. ಕೇಂದ್ರ ಸರ್ಕಾರದವರು ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಪಾಪ, ವಿಧಾನಸಭಾ ಸದಸ್ಯರನ್ನು ಕನ್‌ಸಲ್ಟ್ ಮಾಡಿ ಎಲ್ಲಿಲ್ಲಿ ಕೆಲಸ ಆಗಬೇಕೆಂದು ಅವರು ಅರಿತು ಅದರ ಪ್ರಕಾರವೇ ಅವರು ಹಣ ಕೊಡುತ್ತಿದ್ದಾರೆ. ಬಹಳ ಸಂತೋಷದ ವಿಚಾರ. ಹಾಗಾದರೆ ಪ್ಲಾನಿಂಗ್ ಇಲಾಖೆ ಯಾಕಿರಬೇಕು ಸ್ವಾಮಿ? ಒಂದು ಕಡೆ ಪ್ಲಾನಿಂಗ್ ಮಾಡುವುದು, ಮತ್ತೊಂದು ಕಡೆ ಈ ರೀತಿ ಮಾಡುವುದು. ಇವತ್ತು ಡಿಸ್ಟ್ರಿಬ್ಯೂಸರಿ ಗ್ರಾಂಟ್‌ಗಳ ಪರಿಸ್ಥಿತಿ ಏನಾಗಿದೆ? ರಾಜಕೀಯವಾಗಿ ಯಾವರೀತಿ ಉಪಯೋಗಿಸಿಕೊಳ್ಳಲು ಹೊರಟಿದ್ದಾರೆಂಬುದು ನಮಗೆ ಗೊತ್ತಿದೆ. ಇದರ ಬಗ್ಗೇನೂ ನಮ್ಮ ತಕರಾರಿಲ್ಲ. ಪೂರಕ ಅಂದಾಜುಗಳ ಮೇಲಿನ ಚರ್ಚೆ ಸಂದರ್ಭದಲ್ಲಿ ನಾನು ಮಾತನಾಡಬೇಕೆಂದಿದ್ದೆ ಇದರ ಬಗ್ಗೆ. ಈ ಸರ್ಕಾರ ಅನುತ್ಪಾದಕ ಖರ್ಚು ನಾವು ಕಟ್ ಮಾಡಿಬಿಡುತ್ತೇವೆ, ಪಾರದರ್ಶಕ, ಸರಳತೆಯ, ಸಜ್ಜನತೆಯ ಸರ್ಕಾರ ನಮ್ಮದು ಎಂದು ಹೇಳಿದವರು ಯಾರಿಗೆ ಫ್ಲೀಸ್ ಮಾಡುವುದಕ್ಕೆ ನೀವು ಈ ಲೋಕಸಭಾ ಸದಸ್ಯರಿಗೆ ಕೊಡುತ್ತಿದ್ದೀರಿ? ಈಗಿರುವುದು ಸಾಲುವುದಿಲ್ಲವೇ? 44 ಮಂತ್ರಿಗಳಿದ್ದಾರೆ. ಅಸೆಂಬ್ಲಿಗೆ 20 ಮಂತ್ರಿಗಳು ಬರುತ್ತಾರೆ. ಅಧ್ಯಕ್ಷರು ಕಳಿಸುವ ಪ್ರಶ್ನೆಗಳಿಗೆ ಉತ್ತರ ಕಳಿಸಲು ಒಂದು ವಾರ ತೆಗೆದುಕೊಳ್ಳುತ್ತಾರೆ. ಇವರ ಜೊತೆಗೆ ಇನ್ನೂ 28 ಲೋಕಸಭಾ ಸದಸ್ಯರನ್ನೂ ನೀವು ಡೆಪ್ಯುಟಿ ಮಿನಿಸ್ಟರಾಗಿ ಸ್ಟೇಟಸ್ ಕೊಡುತ್ತಿದ್ದೀರಿ. ಜಿಲ್ಲಾಧಿಕಾರಿಗಳಿಗೆ, ಜಿಲ್ಲಾಪಂಚಾಯತಿ ಸಿಇಓಗಳಿಗೆ ನಿಮಗೆ ಗೊತ್ತಿದೆ ಮೀಟಿಂಗ್ ಮೇಲೆ ಮೀಟಿಂಗ್. ಎಲ್ಲಪ್ಪ ಹೋಗಿದ್ದೆ? ಮೀಟಿಂಗಿಗೆ ಹೋಗಿದ್ದೆ, ಯಾರು ಕರೆದರು? ಜಿಲ್ಲಾಪಂಚಾಯ್ತಿ ಅಧ್ಯಕ್ಷರು, ಯಾರು ಕರೆದರು? ಸಬ್-ಕಮಿಟಿ ಕರೆದಿತ್ತು ಇಲ್ಲ ಜಿಲ್ಲಾಮಂತ್ರಿಗಳು ಕರೆದಿದ್ದರು. ಇನ್ನು ಮೇಲೆ ಜಿಲ್ಲಾ ಲೋಕಸಭಾ ಸದಸ್ಯರು ಕರೆದಿದ್ದರು ಅನ್ನುತ್ತಾರೆ. ಒಂದೊಂದು ಜಿಲ್ಲೆಗೆ ಮೂರು ನಾಲ್ಕು ಲೋಕಸಭಾ ಸದಸ್ಯರು. ಲೋಕಸಭೆಗೆ ಕೊಟ್ಟಮೇಲೆ ರಾಜ್ಯಸಭೆ ಸದಸ್ಯರಿಗೂ ಕೊಡಿ ಎಂದು ಕೇಳುತ್ತಾರೆ. ದೇಶದಲ್ಲಿ ಇದು ಚರ್ಚೆಯಾಗಲಿ, ಆಗಲೇಬೇಕು. ಈ ಸದನದಿಂದಲೇ ಆಗಲಿ. ತೊಂದರೆಯೇನಿಲ್ಲ. ನೇರವಾಗಿ ನಾನು ಹೇಳುತ್ತಿದ್ದೇನೆ ಒಂದು ವರ್ಷವಾಗಿದೆ, ಹನಿಮೂನ್ ಪೀರಿಯ್ಡ್ ಮುಗಿದಿದೆ. ಕೆಲಸ ಮಾಡಬೇಕು. ಇವರ ವಿರುದ್ಧ ಡಿಸಿಡೆಂಟ್ ಚಟುವಟಿಕೆ ಆಗಬಾರದೆಂದು ಆಡಳಿತ ಪಕ್ಷದ ಎಂಪಿಗಳಿಗೆ ಫ್ಲೀಸ್

ಮಾಡಬೇಕೆಂಯ ಡೆಪ್ಯುಟಿ ಮಿನಿಸ್ಟರ್ ಸವಲತ್ತು ಕೊಟ್ಟಿದ್ದಾರೆ. ಇದಕ್ಕೆ ಉತ್ತರ ಕೊಡಲಿ, ಇಲ್ಲವಿದ್ದರೆ ಎಂಟಿಗಳನ್ನು ಫ್ಲೀಸ್ ಮಾಡಬೇಕಾದ ಅವಶ್ಯಕತೆ ಏನಿತ್ತು? ಇವರ ವಿರುದ್ಧ ಎಂಟಿಗಳು ಏನೂ ಮಾಡಬಾರದೂಂತ ಅವರನ್ನು ಫ್ಲೀಸ್ ಮಾಡುವುದಕ್ಕೆ ಮಾಡಿದ್ದೀರಾ? ಇದು ಭಾಷಣ. ವಿಧಾನಸಭೆಗೆ ಜನ ನಮ್ಮನ್ನು ಆಯ್ಕೆ ಮಾಡಿ ಕಳಿಸಿರುವುದು ಭಾಷಣ ಮಾಡಲೆಂದೇ ಹೊರತು ನಾನು ಕಿವುಡರ ಶಾಲೆಗೆ ಬಂದಿಲ್ಲ ಸ್ವಾಮಿ. ಮೂಕರ ಶಾಲೆಗೆ ಬಂದಿಲ್ಲ. ವಿಧಾನಸಭೆಗೆ ಬಂದಿರುವುದು ಮಾತನಾಡುವುದಕ್ಕಾಗಿ ಯಾರಿಂದಲೂ ಪಾಠ ಕೇಳಿ ಮಾತನಾಡುವ ಅವಶ್ಯಕತೆ ನನಗಿಲ್ಲ. ಇದು ಜೀರೋ ಅವರೋ, ಡಬಲ್ ಜೀರೋ ಅವರೋ, ತಾವು ಅವಕಾಶ ಕೊಟ್ಟಿದ್ದೀರಿ.

ಅಧ್ಯಕ್ಷರು :— ಇನ್ನೂ ಅವಕಾಶ ಕೊಟ್ಟಿಲ್ಲ, ಕೊಡಬೇಕೆಂದು ನೀವು ಒಲಿಸುತ್ತಿದ್ದೀರಿ ಅಷ್ಟೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ನಾನು ಗಂಭೀರವಾಗಿರಲು ಇಚ್ಛಿಸುತ್ತೇನೆ. ನಿನ್ನೆ ವಿಧಾನಪರಿಷತ್ತಿನ ಅಧ್ಯಕ್ಷರು ಕೊಟ್ಟ ತೀರ್ಮಾನದ ಬಗ್ಗೆ ಸರ್ಕಾರ ಪ್ರಶ್ನೆ ಮಾಡಿದೆ ಎಂಬುದೂ ತಮಗೆ ಗೊತ್ತಿದೆ ಅದರಿಂದಾಗಿ ಅಧ್ಯಕ್ಷರೇ ನಮ್ಮ ಹಾಳೆಗೂ ಇತಿಮಿತಿ ಇರುತ್ತದೆ. ಈ ಸರ್ಕಾರ ಮಾಡುವುದನ್ನು ಹೇಳಬೇಕಾಗುತ್ತದೆ. ಜೀಳದೇ ಹೋದರೆ ನಾವೆಲ್ಲ ಆಡಳಿತ ಪಕ್ಷದ ಬಾಲಬಡುಕರು ಎಂದು ಹೇಳಿಸಿಕೊಂಡು ಹೋಗಲು ನಾವು ಬಂದಿಲ್ಲ. ನಾವಿರುವುದೇ ಆದಕ್ಕೋಸ್ಕರವಾಗಿ ನಿಮಗೆ ಮೆಜಾರಿಟಿ ಇದೆ, ಏನು ಬೇಕೋ ಅದನ್ನು ಮಾಡಿಕೊಳ್ಳಿ. ಆದರೆ ಸಂವಿಧಾನಕ್ಕೆ ಅಪಚಾರ ಮಾಡುವತ್ತ, ಇನ್ನೊಂದು ರಾಜಕೀಯ ಶಕ್ತಿಯನ್ನು ಎತ್ತಿಕಟ್ಟುವ ಕೆಲಸ ನೀವು ಮಾಡುವುದರಿಂದ ಈ ಸದನಕ್ಕೆ ಅಪಚಾರವಾಗುತ್ತದೆ. 28 ಪ್ಲಸ್ 14 ಒಟ್ಟು 42 ಜನರನ್ನು ಹೊಸ ಮಂತ್ರಿಗಳನ್ನು ಮಾಡಲು ಇವರು ಹೊರಟಿದ್ದಾರೆ ಅವರು ಡೆಪ್ಯುಟಿ ಮಿನಿಸ್ಟರ್ ಆದ ಮೇಲೆ ಅವರೂ ರಿವ್ಯೂ ಮಾಡುತ್ತಾರೆ, ಜಿಲ್ಲಾಧಿಕಾರಿಗಳನ್ನು ಕರೆಯುತ್ತಾರೆ, ಸಿಇಓಗಳನ್ನು ಕರೆಯುತ್ತಾರೆ. ನೀವು ಸದುದ್ದೇಶ ಇಟ್ಟುಕೊಂಡಿರಬಹುದು, ನಾನು ಇಲ್ಲ ಎನ್ನುವುದಿಲ್ಲ. ನಿಮಗೆ ಸದುದ್ದೇಶ ಇದ್ದರೆ ಬರೀ ಸ್ಟೇಟಸ್ ಕೊಟ್ಟಿದ್ದೀರೋ ಅಥವಾ ಇನ್ನೊಂದಷ್ಟು ಫೆಸಿಲಿಟೀಸ್ ಕೊಟ್ಟಿದ್ದೀರೋ. ಇದರ ಬಗ್ಗೆ ನಮಗೆ ತಿಳುವಳಿಕೆ ಆಗಬೇಕು. ಈ ರಾಷ್ಟ್ರದ ಅತ್ಯಂತ ಸಮಸ್ಯೆಯಾಗಿರುವ ಡಬ್ಲ್ಯೂಟಿಓ ಬಗ್ಗೆ, ಗ್ಯಾಟ್ ಬಗ್ಗೆ, ರೈತರು ಸಾಯುತ್ತಿರುವ ಬಗ್ಗೆ ಎಷ್ಟು ಎಂಟಿಗಳು ಪ್ರಶ್ನೆ ಮಾಡಿದ್ದಾರೆಂಬುದು ನಮಗೆ ಗೊತ್ತಿದೆ.

+ ಶ್ರೀ ಡಿ.ಬಿ. ಚಂದ್ರೇಗೌಡ (ಸಂಸದೀಯ ವ್ಯವಹಾರಗಳ ಸಚಿವರು) :— ಅಧ್ಯಕ್ಷರೇ ಕೆಲವು ತಪ್ಪು ಮಾಹಿತಿಗಳು ಕಡತಕ್ಕೆ ಹೋಗಬಾರದು. ಕೆಲವು ಸಂಶಯಗಳಿವೆ ಅವನ್ನು ನಿವಾರಣೆ ಮಾಡುವುದು ಸರ್ಕಾರದ ಕರ್ತವ್ಯ. ಎರಡು ವಿಚಾರಗಳಿವೆ. ಒಂದು, ಹಿರಿಯ ಸದಸ್ಯರಾದ ಮಾನ್ಯ ಪಿ.ಜಿ.ಆರ್. ಸಿಂಧ್ಯ ಅವರು ಮತ್ತು ಜಯಪ್ರಕಾಶ್ ಏನು ಹೇಳಿದ್ದಾರೆ ಎಂದರೆ ಡೆಪ್ಯುಟಿ ಮಿನಿಸ್ಟರ್ಸ್ ಸ್ಟೇಟಸ್ ಕೊಟ್ಟಿದ್ದೀರಿ ಎಂದು ಹೇಳಿದರು,

ಆದ್ದರಿಂದ ಅದರ ಬಗ್ಗೆ ಮೊದಲಿಗೆ ವಿವರಿಸುತ್ತೇನೆ ಕರ್ನಾಟಕ ಸಿವಿಲ್ ಸರ್ವೀಸ್ 1977, ಇದರಡಿ ಹಿಂದೆ ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯರಿಗೆ ಕೆಲವು ಫೆಸಿಲಿಟೀಸನ್ನು ಕೊಡಬೇಕೆಂದು 1993ರಲ್ಲಿ ತೀರ್ಮಾನವಾಯಿತು. ಆಮೇಲೆ ಸ್ವಲ್ಪ ವಿಸ್ತೃತವಾಗಿ ಬೆಳೆದಿದೆ. ಏನೇನು ಕೊಟ್ಟಿದ್ದೇವೆಂದು ಹೇಳಲು ನಾನು ಸಿದ್ಧನಿದ್ದೇನೆ. ಇತ್ತೀಚಿನದನ್ನು ಅವರು ರೆಫರ್ ಮಾಡಿದ್ದಾರೆ, ಬಹಳ ಮುಖ್ಯವಾದದ್ದೇನೆಂದರೆ ಒಂದು ತಿದ್ದುಪಡಿ ನಾವೇನು ಕಳಿಸಿದ್ದೇವೆ ರೂಲ್ಸ್ 15 ಕ್ಕೆ ಅದರ ಸಬ್ ಕ್ಲಾಸ್ ಎರಡನ್ನು ಸದಸ್ಯರು ರೆಫರ್ ಮಾಡಿದರು For the words "or the deputy minister concerned", the words "Deputy Minister or the MP concerned" shall be substituted, ಎಂದಿದೆ. ಏತಕ್ಕೆ ಈ ಪ್ರಸ್ತಾಪ ಬಂತು ಅಂದರೆ ನಾವು ಕೊಟ್ಟಿರುವ ಅನೇಕ ಸವಲತ್ತುಗಳ ಬಗ್ಗೆ ಇತ್ತೀಚೆಗೆ ಒಂದು ಪ್ರಶ್ನೆ ಬಂತು. ಒಬ್ಬ ಪರ್ಸನಲ್ ಸೆಕ್ರೆಟರಿ ಕೊಡಬೇಕು, ಡ್ರೈವರ್ ಕೊಡಬೇಕು, ಒಬ್ಬರು ಗನ್‌ಮೆನ್ ಕೊಡಬೇಕು, ಒಬ್ಬರು ಕ್ಲರ್ಕ್ ಕೊಡಬೇಕು ಎಂದು ಈ ತೀರ್ಮಾನವಾಗಿತ್ತು. ಇವರೇನು ಕೇಳಿದರು, ಮಂತ್ರಿಗಳು ಯಾರನ್ನು ಕಾಂಟ್ರಾಕ್ಟ್ ಬೇಸಿಸ್ ಮೇಲೆ ಮಾಡಿಕೊಳ್ಳುತ್ತಾರೋ ಹಾಗೆಯೇ ನಮಗೂ ಕೂಡ ಕಂಟ್ರಾಕ್ಟ್ ಬೇಸಿಸ್ ಮೇಲೆ ಅವಕಾಶ ಕೊಡುವಾಗ ನಮಗೇನು ಮುಖ್ಯಮಂತ್ರಿಗಳು ತಮ್ಮ ಕಛೇರಿಯಲ್ಲಾಗಲಿ, ಮಿನಿಸ್ಟರ್ ಆಫ್ ಸ್ಟೇಟ್ ಕಛೇರಿಯಲ್ಲಾಗಲಿ ಅಥವಾ ಇನ್ನಿತರ ಕಛೇರಿಗಳಲ್ಲಿ ಪಾಸಗಿಯಾಗಿ ಅವರಿಗೆ ವಿಶ್ವಾಸ ಇರತಕ್ಕಂಥವರನ್ನು ತೆಗೆದುಕೊಳ್ಳುವ ಅಧಿಕಾರವನ್ನು ಕೊಡಬೇಕು. It is not the status. ಆ ಅಧಿಕಾರವನ್ನಷ್ಟೇ ಅವರಿಗೆ ಕೊಟ್ಟಿದ್ದೇವೆ. They can recruit anybody whomsoever they choose on contract basis. It is limited to that extent. I am trying to clarify that it is not the "status" to that of Dy. Minister. Let it not go to the records. ಡೆಪ್ಯುಟಿ ಮಿನಿಸ್ಟರ್ ಎಂದು ಹೇಳಿ ಯಾರೂ ಎಲಿವೇಟ್ ಮಾಡಿಲ್ಲ. For the purpose of appointment of a person in whom he has confidence on contract basis ಅದಷ್ಟಕ್ಕೇ ಸೀಮಿತವಾಗಿ ಕೊಟ್ಟಿದ್ದೇವೆ. ಇವರಿಗೆ ಕೊಡುವ ಸ್ಕಾಲರಿಸ್, ಅಲೊಯೆನ್ಸ್ ಮತ್ತೊಂದೂ ಯಾವ ಸ್ಟೇಟಸನ್ನೂ ಅದರಲ್ಲಿ ಕೊಟ್ಟಿಲ್ಲ. Only to appoint a person as his private assistant of his choice on contract basis ಅದಕ್ಕಾಗಿ ಸೆಕ್ಷನ್ 15(1)ಕ್ಕೆ ನಾವು ಅಮೆಂಡ್‌ಮೆಂಟನ್ನು ತರಬೇಕಾಯಿತು. ಆ ಸೆಕ್ಷನ್‌ನ್ನು ನೋಡಿದರೆ ತಮಗೆ ಅರ್ಥವಾಗುತ್ತದೆ. That section-15 itself is an provision of the Karnataka Civil Services Rules, 1977 - provision for apppointment. Under that provision we have made that they can appoint their own person whomsoever they may choose on contract basis. The very rule is meant for that. ಇದು ಒಂದು. ಎರಡನೆಯದು ಕೆಂಪು ದೀಪ ಹಾಕುತ್ತಾರೆ ಎಂದು ನಿಜ. ಇದನ್ನು ಒಂದಲ್ಲ ಒಂದು ದಿವಸ ನಾವು ಕ್ಲಾರಿಫೈ ಮಾಡಬೇಕು. ನಾನು ಇವತ್ತು ತಮ್ಮ ಮೂಲಕ ಈ ಸದನದಲ್ಲಿ ಯಾರು ಕೆಂಪು

ದೀಪವನ್ನು ಹಾಕಬಹುದು ಎಂಬುದಕ್ಕೆ ನೋಟಿಫಿಕೇಷನ್ ಇದೆ. ಈ ನೋಟಿಫಿಕೇಷನ್‌ನಲ್ಲಿ "His Excellency the Governor of Karnataka, Hon'ble Chief Minister, Chairman, Karnataka Legislative Council, Speaker, Karnataka Legislative Assembly , Hon'ble Chief Justice of Karnataka High Court, Hon'ble Judges of the High Court, Lokayukta, Cabinet Ministers, Minister of State, Leader of the Opposition in the Legislative Assembly and in the Legislative Council, Deputy Ministers, Chief Secretary to Government of Karnataka, Addl. Chief Secretary to Government of Karnataka, Principal Secretary to Home and Transport Department, Karnataka Government, Director General of Police, Karnataka, Divisional Commissioner of Revenue Division, Special Inspector General of Police and Commissioner of Police Bangalore City, Dy. Inspector General of Police in police ranges of Karnataka State, City Corporation Mysore, Transportation Commissioner, Transport Department, KarnatakaState, Dy. Commissioner/District Magistrate, Districts of Karnataka, Superintendents of Police of Districts, Dy. Commissioner of Police in City Corporation Limit, Asst. Commissioner and Sub-Divisional Magistrate, Districts, Dy. Commissioner of Police in City Corporation Limit, Assistant Commissioner and sub-Divisional Magistrate of their respective jurisdictional sub-division of the districts of Karnataka, and Dy.Superintendent of Police in the police sub-division." ಇದು ಇಷ್ಟು ಬಿಟ್ಟರೆ ಆಮೇಲೆ ಒಂದು ಅಮೆಂಡ್‌ಮೆಂಟನ್ನು ಮಾಡಿದ್ದೇವೆ. ತಮಗೆ ಗೊತ್ತಿದೆ. ಅದರಲ್ಲಿ ಕೆಲವು ಐಟಂಸ್‌ನ್ನು ಮತ್ತೆ ಸೇರಿಸಿದ್ದಾರೆ. ಅದರಲ್ಲಿ Commissioner of Customs, Commissioner of Central Excise, Commissioner of Central Excise, Bangalore - II, Commissioner of Central Excise, Bangalore - III, Commissioner of Central Excercise, Belgaum, Commissioner of Customs, Mangalore, ಇನ್ನೊಂದು ಅಮೆಂಡ್‌ಮೆಂಟ್‌ನಲ್ಲಿ Government Government of Karnataka hereby amends the notification. In the notification so and so, the Secretary to Government-II Transport and Home Department and after the Entry in item No.26, Chief Commissioner of Customs and Central Excise, Bangalore. There are

the only designated persons ಜಿಲ್ಲಾ ಪಂಚಾಯತಿ ಅಧ್ಯಕ್ಷರುಗಳಿಗೆ ಇಲ್ಲ. ಹಿಂದೆ ಇತ್ತು. ಅದನ್ನು ತೆಗೆದಿದ್ದಾರೆ. ಎಂ.ಪಿ.ಗಳಿಗೂ ಇಲ್ಲ. ನೋಟಿಫಿಕೇಷನ್ ಪ್ರಕಾರ ಲೋಕಸಭಾ ಸದ್ಯಸರು ಅಥವಾ ರಾಜ್ಯಸಭಾ ಸದಸ್ಯರುಗಳಿಗೂ ಇಲ್ಲ. ಆದ್ದರಿಂದ ಡೆಪ್ಯುಟಿ ಮಿನಿಸ್ಟರ್ ಸ್ಟೇಟಸನ್ನೂ ಕೊಟ್ಟಿಲ್ಲ. ನೋಟಿಫಿಕೇಷನ್‌ನಲ್ಲಿ ಕೆಂಪು ದೀಪ ಹಾಕುವ ಹಾಗೂ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಡೆಪ್ಯುಟಿ ಮಿನಿಸ್ಟರ್ ಎನ್ನುವ ಶಬ್ದ ಏತಕ್ಕೆ ಬಂತು?

ಶ್ರೀ ಡಿ.ಬಿ. ಚಂದ್ರೇಗೌಡ :— ನಾನು ರೂಲನ್ನು ಓದಿದೆ. ಆ ರೂಲ್‌ನಲ್ಲಿ ಸವಲತ್ತನ್ನು ಕೊಡುವುದಕ್ಕಾಗಿ ಡೆಪ್ಯುಟಿ ಮಿನಿಸ್ಟರ್ ಎನ್ನುವ ಪದ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಅದರ ಅರ್ಥವೇನೆಂದರೆ ಡೆಪ್ಯುಟಿ ಮಿನಿಸ್ಟರ್‌ಗೆ ಕೂಡತಕ್ಕ ಸ್ಟೇಟಸನ್ನು ಕೊಟ್ಟಿದೆ.

ಶ್ರೀ ಕೆ.ಹೆಚ್. ಹನುಮೇಗೌಡ :— ಎಂ.ಪಿ.ಗಳಿಗೆ ಈಗ ಇರುವ ಸ್ಟೇಟಸ್ ಕಡಿಮೆಯಾಗಿತ್ತಾ?

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ನೀವು ಫೆಸಿಲಿಟೀಸನ್ನು ಕೊಡುವುದರ ಬಗ್ಗೆ ಯಾರದು ಏನೂ ತಕರಾರು ಇಲ್ಲ. ಸ್ಟೇಟಸ್ ಆಫ್ ದಿ ಡೆಪ್ಯುಟಿ ಮಿನಿಸ್ಟರ್ ಎಂದ ತಕ್ಷಣವೇ it is also a shameful thing to them. ಏಕೆಂದರೆ ದೊಡ್ಡ ದೊಡ್ಡ ನಾಯಕರಾಗಿರತಕ್ಕವರೆಲ್ಲ ಇವತ್ತು ಎಂ.ಪಿ.ಗಳಾಗಿದ್ದಾರೆ. How can they become Deputy Minister? Please don't insult thgem by using the word Deputy Minister. You please withdraw that notification.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ನಾನು ಲೋಕಸಭಾ ಸದಸ್ಯನಾಗಿದ್ದರೂ ಈ ಸವಲತ್ತುಗಳನ್ನು ಕೊಡಬಾರದೆಂದು ಹೇಳುತ್ತಿದ್ದೆ. ಅವರಿಗೆ ಈಗಾಗಲೇ ಫೆಸಿಲಿಟೀಸ್ ಇದೆ. ರಾಜ್ಯ ಸರ್ಕಾರದಿಂದ ಕಾರುಗಳನ್ನು ಕೊಡುತ್ತಿದ್ದಾರೆ, ಶಾಸಕರಿಗೆ ಒಪ್ಪಲಿಲ್ಲ, ಶಾಸಕರು ಕಾಂಟ್ರಾಕ್ಟ್ ಬೇಸಿಸ್‌ನಲ್ಲಿ ಸ್ಕಾರ್ಪನ್ನು ಅಪಾಯಿಂಟ್ ಮಾಡಿಕೊಳ್ಳುವ ಬಗ್ಗೆ ಕೇಳಿಕೊಂಡಾಗ ಒಪ್ಪಲಿಲ್ಲ. ಈ ಸವಲತ್ತುಗಳನ್ನು ಶಾಸಕರಿಗೂ ಏಕೆ ನೀವು ಕೊಡಬಾರದು? ನಮ್ಮ ಕ್ಷೇತ್ರದಲ್ಲಿ ಅಥವಾ ನಮ್ಮ ತಾಲ್ಲೂಕಿನಲ್ಲಿ ಯಾರನ್ನಾದರೂ ಸೆಕೆಂಡರಿ ಡಿವಿಜನ್ ಕ್ಲರ್ಕ್‌ನ್ನು ತೆಗೆದುಕೊಳ್ಳಿ ಎಂದು ಹೇಳಿದರಿ. ಆದರೆ ಕಾಂಟ್ರಾಕ್ಟ್ ಬೇಸಿಸ್ ಮೇಲೆ ತೆಗೆದುಕೊಳ್ಳುವುದಕ್ಕೆ ಅವಕಾಶ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ನೀವೇ ಕಾನೂನು ಮಾಡಿದಿರಿ. ಕಾಂಟ್ರಾಕ್ಟ್ ಬೇಸಿಸ್ ಮೇಲೆ ತೆಗೆದುಕೊಂಡಿರತಕ್ಕ ಅಧಿಕಾರಿಯನ್ನು ಆರು ತಿಂಗಳು ಜೈಲಿಗೆ ಕಳುಹಿಸುತ್ತೇನೆ ಎಂದಿದ್ದೀರಿ. ಇಲ್ಲಿಗೆ ಬಂದಮೇಲೆ ನೀವೇ ಕಾನೂನನ್ನು ಮಾಡಿದಿರಿ. ತಾವೇನೆ ಅವರಿಗೆ

ಸ್ಪೆಷಲ್ ಆಗಿ ಎಂದು ಹೇಳಿ ಡೆಪ್ಯುಟಿ ಮಿನಿಸ್ಟರ್ ಸ್ಟೇಟಸನ್ನು ಕೊಟ್ಟು ಯಾರನ್ನು ಪ್ಲೀಸ್ ಮಾಡುವುದಕ್ಕೆ ಹೊರಬಿದ್ದೀರಿ ಎಂದು ನಮಗೆ ಅರ್ಥವಾಗಿಲ್ಲ. ಆದ್ದರಿಂದ ನಮ್ಮ ಒತ್ತಾಯ ಏನೆಂದರೆ ಆ ನೋಟಿಫಿಕೇಶನನ್ನು ವಿತ್‌ಡ್ರಾ ಮಾಡಬೇಕು. ಇಡೀ ಸದನದ ಎಲ್ಲಾ ಸದಸ್ಯರುಗಳ ಒಂದು ಅಭಿಪ್ರಾಯವಿದು.

ಶ್ರೀ ಡಿ.ಕೆ. ಶಿವಕುಮಾರ್ :— ವಿರೋಧಪಕ್ಷದವರ ಅಭಿಪ್ರಾಯವೆಂದು ಹೇಳಿ. ಸದನದ ಎಲ್ಲಾ ಸದಸ್ಯರುಗಳ ಅಭಿಪ್ರಾಯವೆಂದು ಏತಕ್ಕೆ ಹೇಳುತ್ತೀರಿ? ಬರೀ ನಿಮ್ಮದು ಮಾತ್ರ ಎಂದು ಹೇಳಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ನೋಟಿಫಿಕೇಷನ್ ಬಗ್ಗೆ ದಯವಿಟ್ಟು ರೀಕನ್‌ಸಿಡರೇಷನ್ ಮಾಡಬೇಕು ಏಕೆ ಎಂದು ಹೇಳಿದರೆ ನೀವೆಲ್ಲೂ ಹೇಳಿಲ್ಲ. ಸ್ಟೇಟಸ್ ಆಫ್ ಎ ಡೆಪ್ಯುಟಿ ಮಿನಿಸ್ಟರ್ ಎಂದು ಹೇಳಿದ್ದೀರಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ನೋಟಿಫಿಕೇಷನ್ ಬಗ್ಗೆ ಚರ್ಚೆಯಾಗಲಿ. ಆಮೇಲೆ ಅದನ್ನು ಬೇಕಾದರೆ ಜಾರಿಗೆ ಕೊಡಿ.

ಅಧ್ಯಕ್ಷರು :— ಚರ್ಚೆ ಬೇಕೋ ಬೇಡವೋ ಎನ್ನುವ ಬಗ್ಗೆ ಮೊದಲು ಡಿಸೈಡ್ ಮಾಡೋಣ.

ಶ್ರೀ ಸಿ. ಚನ್ನಿಗಪ್ಪ :— ಎಂ.ಪಿ.ಗಳಿಗೆ ಎರಡು ಕೋಟಿ ರೂಪಾಯಿಗಳನ್ನು ಕೊಡುತ್ತಾರೆ. ಶಾಸಕರಿಗೆ ಅಟ್ ಲೀಸ್ಟ್ ಒಂದು ಕೋಟಿ ಆದರೂ ಕೊಡುವ ಬಗ್ಗೆ ಸರ್ಕಾರ ವ್ಯವಸ್ಥೆ ಮಾಡಬೇಕು.

ಶ್ರೀ ಕೆ.ಹೆಚ್. ರಂಗನಾಥ್ :— ಯಾವುದೂ ಕೊಡಬೇಡಿ ಎಂದು ಅವರು ಹೇಳುತ್ತಾರೆ. (ನಗು)ವನ್ನು ಪ್ರಸ್ತಾಪ ಮಾಡಿದರೋ ಆ ಬಗ್ಗೆ ಶ್ರೀಮಾನ್ ಚಂದ್ರೇಗೌಡರು ಉತ್ತರಕೊಟ್ಟಿದ್ದಾರೆ. ಮುಖ್ಯವಾಗಿ ನಾವು ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೋ ಬೇಡವೋ ಎನ್ನುವ ಬಗ್ಗೆ ನೋಡಬೇಕು. ಬಹುಶಃ ಅವರು ಉತ್ತರ ಹೇಳಿದಮೇಲೆ ಅದು ಅಂತಹ ಅವಶ್ಯಕತೆ ಇಲ್ಲ. ಚರ್ಚೆಗೆ ತೆಗೆದುಕೊಳ್ಳಬೇಕಾಗಿದ್ದರೆ ನಾನು ಮತ್ತೊಮ್ಮೆ ಸಭಾನಾಯಕರನ್ನು ಕನ್‌ಸಲ್ಟ್ ಮಾಡಿ ಮುಂದಿನ ವಾರದಲ್ಲಿ ತೆಗೆದುಕೊಳ್ಳೋಣ. ಅಲ್ಲಿಗೆ ಈ ವಿಷಯವನ್ನು ಸಾಕು ಮಾಡೋಣ.